# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./213 /2018-2019

ದಿನಾಂಕ : 16ನೇ ಜುಲೈ 2018

E.mail-dir.deptofphyedn@gmail.com
Ph. No. 0821-2419288

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ
ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ವಿಷಯ : ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರು ಮತ್ತು ಮಹಿಳೆಯರ ಕ್ರಾಸ್‌ಕಂಟ್ರಿ ಸ್ಪರ್ಧೆಗಳು ಹಾಗೂ ವಿಶ್ವವಿದ್ಯಾನಿಲಯ ತಂಡಗಳ ಆಯ್ಕೆ ಸ್ಪರ್ಧೆ 2018-2019

* * * * * *

ಈ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕ್ರಾಸ್‌ಕಂಟ್ರಿ (ಪು/ಮ) ಸ್ಪರ್ಧೆ ಹಾಗೂ ವಿಶ್ವವಿದ್ಯಾನಿಲಯದ ಕ್ರಾಸ್‌ಕಂಟ್ರಿ ತಂಡಗಳ ಆಯ್ಕೆ ಪ್ರಕ್ರಿಯೆಯನ್ನು ಟಿ. ನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ದಿನಾಂಕ 1ನೇ ಸೆಪ್ಟೆಂಬರ್ 2018 ರಂದು ಬೆಳಿಗ್ಗೆ 6-00 ಘಂಟೆಗೆ ನಡೆಸಲಾಗುವುದು. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಿಗಳು ದಿನಾಂಕ 31ನೇ ಆಗಸ್ಟ್ 2018 ರಂದು ಸಂಜೆ 4-30ಕ್ಕೆ ಟಿ. ನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವೈದ್ಯಕೀಯ ತಪಾಸಣೆ ಪ್ರಮಾಣ ಪತ್ರದ ಜೊತೆಯಲ್ಲಿ ಹಾಜರಿರಬೇಕು. ವೈದ್ಯಕೀಯ ತಪಾಸಣೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಸ್ಪರ್ಧಿಗಳನ್ನು ಮಾತ್ರ ಕ್ರಾಸ್‌ಕಂಟ್ರಿ ಸ್ಪರ್ಧೆಗಳಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದು. ಮೇಲ್ಕಂಡ ಸ್ಪರ್ಧೆಗಳಿಗೆ ಪ್ರವೇಶ ಪತ್ರವನ್ನು ಸ್ವೀಕರಿಸಲು 28ನೇ ಆಗಸ್ಟ್ 2018 ರಂದು ಕಡೆಯ ದಿನಾಂಕವಾಗಿರುತ್ತದೆ. ನಿಗದಿತ ದಿನಾಂಕದೊಳಗೆ ಪ್ರವೇಶ ಪತ್ರಗಳನ್ನು ಡಾ. ಹೆಚ್.ವಿ. ಉದಯಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ. ನರಸೀಪುರ – ಮೈಸೂರು ಜಿಲ್ಲೆ ಇವರಿಗೆ ಕಳುಹಿಸಬೇಕಾಗಿ ವಿನಂತಿ. (ಡಾ. ಹೆಚ್.ವಿ. ಉದಯಕುಮಾರ್‌ರವರ ಮೊಬೈಲ್ ನಂ : **9481815767**)

**<u>ಸ್ಪರ್ಧೆಗೆ ದೂರದ ವಿವರ :</u>**

| | | | |
|---|---|---|---|
| 1. | ಕ್ರಾಸ್‌ಕಂಟ್ರಿ ರೇಸ್ | ಪುರುಷರಿಗೆ | 10 ಕೀಲೋಮೀಟರ್‌ಗಳು |
| 2. | ಕ್ರಾಸ್‌ಕಂಟ್ರಿ ರೇಸ್ | ಮಹಿಳೆಯರಿಗೆ | 10 ಕೀಲೋಮೀಟರ್‌ಗಳು |

ಕ್ರಾಸ್‌ಕಂಟ್ರಿ ಸ್ಪರ್ಧೆಗೆ ಪುರುಷರ ವಿಭಾಗದಲ್ಲಿ ಗರಿಷ್ಠ 6 ಮಂದಿ ತಂಡ ಮತ್ತು ಮಹಿಳಾ ವಿಭಾಗದಲ್ಲಿ ಗರಿಷ್ಠ 6 ಮಂದಿ ತಂಡವನ್ನು ಕಳುಹಿಸಬಹುದು. ತಂಡ ಪ್ರಶಸ್ತಿ ಪಡೆಯಬೇಕಾದರೆ ಪುರುಷರ ವಿಭಾಗದಲ್ಲಿ ಕನಿಷ್ಠ 4 ಮಂದಿ ಮತ್ತು ಮಹಿಳಾ ವಿಭಾಗದಲ್ಲಿ ಕನಿಷ್ಠ 4 ಮಂದಿ ಸ್ಪರ್ಧಿಗಳು ಸ್ಪರ್ಧೆಯನ್ನು ಖಡ್ಡಾಯವಾಗಿ ಮುಕ್ತಾಯಗೊಳಿಸಬೇಕು. ಕಡಿಮೆ ಸಂಖ್ಯೆಯಲ್ಲಿಯೂ ಸಹ ಸ್ಪರ್ಧಿಗಳನ್ನು ಕಳುಹಿಸಬಹುದು.

ಮೇಲ್ಕಂಡ ಸ್ಪರ್ಧೆಗಳಲ್ಲಿ ಭಾಗವಹಿಸಿ ಮೊದಲ ಆರು ಸ್ಥಾನಗಳನ್ನು ಪಡೆದವರಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು ಮತ್ತು ಮೊದಲ ಮೂರು ಸ್ಥಾನಗಳನ್ನು ಪಡೆದವರಿಗೆ ಪದಕಗಳನ್ನು ಹಾಗೂ ತಂಡ ಪ್ರಶಸ್ತಿ ಪಡೆದವರಿಗೆ ಭಾರತೀನಗರದ ಭಾರತೀ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಂ. ಶಿವಲಿಂಗೇಗೌಡರು 2009-2010ನೇ ಸಾಲಿನಲ್ಲಿ ಕೊಡುಗೆಯಾಗಿ ನೀಡಿರುವ ಬೆಳ್ಳಿ ಪರ್ಯಾಯ ಪಾರಿತೋಷಕಗಳನ್ನು ವಿತರಿಸಲಾಗುವುದು.

ದಯಮಾಡಿ ಮೇಲಿನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಹಕರಿಸಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ

16/7/2018

(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು (ಪ್ರಭಾರ)

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು - 5

ವಂದನಾಪೂರ್ವಕವಾಗಿ ಪ್ರತಿಗಳನ್ನು ಸಂಪಾದಕರು/ವರದಿಗಾರರು,..............................ಪತ್ರಿಕೆ, ಮೈಸೂರು ಇವರಿಗೆ ಪ್ರಕಟಣೆಯ ಕೃಪೆಗಾಗಿ ಕಳುಹಿಸಲಾಗಿದೆ.

D/ Sport Time Table- No. 15